**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್ ಕೇಸ್ ನಂ. 24/2015**

**ದೋ.ಸಾ. :32 ಪ್ರಾ.ಸಾ. : 24**

| | |
|---|---|
| ಸಾಕ್ಷಿಯ ಹೆಸರು | : ಹಾಲಪ್ಪ ದೊಡ್ಡಕರಿಯಪ್ಪ ನಾಗಾವಿ |
| ತಂದೆಯ ಹೆಸರು | : ದೊಡ್ಡಕರಿಯಪ್ಪ ನಾಗಾವಿ |
| ವಯಸ್ಸು | : 68 ವರ್ಷ |
| ಉದ್ಯೋಗ | : ನಿವೃತ ತಹಶೀಲ್ದಾರ. |
| ವಾಸ | : ನವನಗರ, ಹುಬ್ಬಳ್ಳಿ. |

**ದಿನಾಂಕಃ 20-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ದಿನಾಂಕ 30.06.2014 ರಿಂದ 31.05.2016 ರವರೆಗೆ ತಹಶೀಲ್ದಾರ ಆಗಿ ಹುಬ್ಬಳ್ಳಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 05.03.2015 ರಂದು ಹೊನ್ನಾವರ ಆರಕ್ಷಕ ಠಾಣೆಯಿಂದ ಆರಕ್ಷಕ ಉಪನಿರೀಕ್ಷಕರು ನನಗೆ ಲಿಖಿತ ಮನವಿ ಸಲ್ಲಿಸಿ ಶ್ರೀಮತಿ ಶಬರೀನ್ ಗಂಡ ಅಬೀದ್ ಶೇಖ್ ಳ ಶವದ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದರು. ಶವ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಯ ಶವಗಾರದಲ್ಲಿ ಇರುವುದಾಗಿ ಮಾಹಿತಿ ನೀಡಿದ್ದರು. ನಂತರ ನಾನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ತೆಗೆ ಭೇಟಿ ನೀಡಿದೆ. ಅಲ್ಲಿ ಮೃತ ಶಬರೀನ್ ಅಬೀದ್ ಶೇಖ್ ಳ ಶವವನ್ನು ನೋಡಿದೆ. ಅಲ್ಲಿ ಹಾಜರು ಇದ್ದ ಆಕೆಯ ತಾಯಿ ದೋಸಾ-18, ತಂದೆ ದೋಸಾ-17 ಶವವನ್ನು ಗುರುತಿಸಿದರು. ಅಲ್ಲೆ ಇದ್ದ ದೋಸಾ-13 ರಿಂದ 15 ರವರನ್ನು ಪಂಚರನ್ನಾಗಿ ಬರಮಾಡಿಕೊಂಡೆ. ಅದೇ ದಿನ ಮಧ್ಯಾಹ್ನ 2.00 ರಿಂದ 3.00 ಗಂಟೆಯವರಿಗೆ ಪಂಚರ ಸಮಕ್ಷಮ ನಾನು ಶವ ಪಂಚನಾಮೆಯನ್ನು ಮಾಡಿದೆ. ಆ ಸಮಯದಲ್ಲಿ ಹಾಜರು ಇದ್ದ ಮೃತಳ ತಾಯಿ ದೋಸಾ-18 ರವರ ಹೇಳಿಕೆಯನ್ನು ಪಡೆದುಕೊಂಡೆ. ಈಗ ನಾನು ಮಾಡಿದ ಪಂಚನಾಮೆ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ-14 (ಸಿ) ಮತ್ತು (ಡಿ) ಎಂದು ಗುರುತಿಸಲಾಯಿತು. ಅದರಲ್ಲಿ ನಾನು ದಾಖಲು ಮಾಡಿರುವ ಹೇಳಿಕೆ ಸಹ ಇದೆ. ನಂತರ ನಾನು ನಿಪಿ-14 ಅನ್ನು ತನಿಖಾಧಿಕಾರಿಯವರಿಗೆ ಅದೇ ದಿನ ರವಾನಿಸಿದೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

2. ನನಗೆ ಲಿಖಿತವಾಗಿ ಶವ ಪಂಚನಾಮೆ ಮಾಡಲು ಮನವಿ ಬಂದಿತ್ತು. ಆ ಮನವಿಯನ್ನು ದಿನಾಂಕ 05.03.2015 ರಂದು ಮಧ್ಯಾಹ್ನ 1.45 ಗಂಟೆಗೆ ನಾನು ಸ್ವೀಕರಿಸಿರುತ್ತೇನೆ. ಶವ ಪಂಚನಾಮೆಯ ಸಮಯದಲ್ಲಿ ಶವವನ್ನು ಸಂಪೂರ್ಣವಾಗಿ ಪ್ಯಾಕ್ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಾನು ಶವಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನಾನು ಬರೆದುಕೊಂಡು ಠಾಣೆಯಲ್ಲಿ ಸಹಿಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ